# ನಿಂತ ಭಂಗಿಯ ನಂದಿ

ಶಿವಮೊಗ್ಗದ ಸಾಗರ ತಾಲ್ಲೂಕು ವಿವಿಧ ಆಳರಸರು ನಿರ್ಮಿಸಿದ ಹಲವು ವಿಶೇಷ ಸ್ಥಳಗಳಿಗೆ ಪ್ರಸಿದ್ಧ. ಅಲ್ಲಿಯ ಬಿಳವಂಜೆ ಎಂಬ ಅರೆಗುಡ್ಡಗಾಡಿನ ಪ್ರದೇಶದಲ್ಲಿರುವ ಅತ್ಯಂತ ಪುರಾತನವಾದ ಕಮಲೇಶ ದೇವಾಲಯವು ಅನೇಕ ವಿಭಿನ್ನತೆಗಳ ಸುಂದರ ಸಂಗಮವಾಗಿದೆ. ಅಲ್ಲಿ ನಂದಿಯು ನಿಂತ ಭಂಗಿಯಲ್ಲಿರುವುದು ಒಂದು ವಿಶೇಷ.

ಸುತ್ತಲಿನ ಹರಿದ್ವರ್ಣದ ಕಾಡು ಮನೋಹರ. ದೇವಾಲಯದಲ್ಲಿ ಚಿಲುಮೆಯ ಮೂಲಕ ಹರಿದು ಬರುವ ಪವಿತ್ರ ನೀರನ್ನು ಸಂಗ್ರಹಿಸಲು ತೀರ್ಥ ಪುಷ್ಕರಣಿಯಿದ್ದು, ಅಲ್ಲಿಂದ ಹೊರ ಹರಿವ ನೀರನ್ನು ನಿತ್ಯಬಳಕೆಯ ಕೆರೆಗೆ ಹಾಗೂ ಆನಂತರ ಕೃಷಿಯ ಉಪಯೋಗಕ್ಕೆ ಬಳಸುತ್ತಾರೆ.

**– ರಮೇಶ್ ಬಿ.ಎಂ., ಉಡುಪಿ**



# ಹಡಗು ಮಾದರಿಯ ಚರ್ಚ್

ಉಡುಪಿ ನಗರದಿಂದ 4 ಕಿ.ಮೀ ದೂರದಲ್ಲಿರುವ ಕಲ್ಮಾಡಿ ಎಂಬಲ್ಲಿ 'ಸ್ಟೆಲ್ಲಾ ಮೇರಿಸ್' ಉಡುಪಿ ಧರ್ಮಪ್ರಾಂತ್ಯಕ್ಕೆ ಸೇರಿರುವ ನವೀಕೃತ ದೇವಾಲಯ ಇದೆ. ಇದು ವೇಲಂಕಣಿ ಆರೋಗ್ಯ ಮಾತೆಯ ಪುಣ್ಯ ಕ್ಷೇತ್ರ . ಈ ಚರ್ಚ್ ಅನ್ನು ಹಡಗಿನ ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದ್ದು, ಈ ಮಾದರಿಯಲ್ಲಿರುವ ಕರ್ನಾಟಕದ ಮೊದಲ ಮತ್ತು ಭಾರತದ ಎರಡನೆಯ ಚರ್ಚ್ ಇದು. ಗಾತ್ರದಲ್ಲಿ ಏಷ್ಯಾದಲ್ಲೇ ಅತೀ ದೊಡ್ಡ ದೇವಾಲಯ ಎಂದು ಗುರುತಿಸಲ್ಪಟ್ಟಿದೆ. ಈ ಚರ್ಚಿನ ಒಟ್ಟು ವಿಸ್ತೀರ್ಣ 10,000 ಚ.ಮೀ. ಏಕಕಾಲದಲ್ಲಿ 800 ಭಕ್ತರು ಪ್ರಾರ್ಥನೆಯನ್ನು ಸಲ್ಲಿಸಿಲು ಸ್ಥಳಾವಕಾಶ ಹೊಂದಿದೆ. ಈ ಚರ್ಚ್ ಉಡುಪಿಯಿಂದ ಮಲ್ಪೆಗೆ ಸಂಪರ್ಕಿಸುವ ಮುಖ್ಯ ರಸ್ತೆಯಲ್ಲಿ ಸಿಗುವ ಕಲ್ಮಾಡಿಯಲ್ಲಿದೆ.

**–ತಾರಾನಾಥ್ ಮೇಸ್ತ, ಕುಂದಾಪುರ**





# ಎತ್ತರದ ಮಾಲಗಂಬ

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕು ಕೇಂದ್ರದಿಂದ 5 ಕಿ.ಮೀ. ದೂರದಲ್ಲಿರುವ ಇವಣಗಿ ಎಂಬ ಗ್ರಾಮದಲ್ಲಿ ಶ್ರೀ ಲಕ್ಷ್ಮಮ್ಮದೇವಿ ದೇವಸ್ಥಾನವಿದೆ. ಅದರ ಮುಂಭಾಗದಲ್ಲಿ 75 ಅಡಿಯ ಮಾಲಗಂಬ ನಿರ್ಮಾಣವಾಗಿದೆ. 2016ರಲ್ಲಿ 28 ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ವರ್ಷದ ಅವಧಿಯಲ್ಲಿ ಇದನ್ನು ಪೂರ್ಣಗೊಳಿಸಲಾಗಿದೆ.

**–ಗುರುರಾಜ ಬ. ಕನ್ನೂರ, ಬಸವನಬಾಗೇವಾಡಿ**